ಈ ವರ್ಷದಿಂದ ಆ ಹಣ ನಮಗೇ ಬರುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳಲು ಇಚ್ಛಿಪಡುತ್ತೇನೆ

28 ವಿಷಯ ಮಾಲೇಕಲ್ ತಿರುಪತಿಯಲ್ಲಿ ರಥೆಯಾತ್ರೆಯ ಸಂದರ್ಭದಲ್ಲಿ ಗೋಪುರ ಕುಸಿದು ಸತ್ತವರಿಗೆ ಮತ್ತು ಗಾಯಗೊಂಡವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಹೆಚ್ ಡಿ ಬಸವರಾಜು (ಎರಾಜಪೇಟೆ) ಮಾನ್ಯ ಅಧ್ಯಕ್ಷರೇ, ಹಾಸನ ಜಇಲ್ಲೆಯ ಆರಸೀಕೆರೆ ತಾಲ್ಲೂಕಿನಲ್ಲಿ ದಿನಾಂಕ 29–6–2004ರಂದು ಮಾಲೀಕಲ್ ತಿರುಪತಿಯಲ್ಲಿ ಬಹಳ ವೈಭವವಾದಂಧ ರಥಯಾತ್ರೆ ನಡೆಯುತ್ತಿತ್ತು ಆ ಯಾತ್ರೆಯ ಸಮಯದಲ್ಲಿ ಸುಮಾರು ಒಂದೂವರೆ ಸಾವಿರ ಮೆಟ್ಟಿಲುಗಳ ಮೇಲಿರುವ ಹಳೆದ ಗೋಪುರ ಕುಸಿದು ಬಿದ್ದು ಹೋಗಿದ್ದು, ಈ ಘಟನೆಯಲ್ಲಿ 41 ಜನರಿಗೆ ಏಟು ಬಿದ್ದಿದ್ದು, ಮೂರು ಜನ ಸತ್ತು ಹೋಗಿರತಕ್ಕಂಧಾದ್ದು ಆಗಿದೆ ಸತ್ತಿರುವ ಈ ಮೂವರಲ್ಲಿ ಒಬ್ಬರು ಕಡೂರು ತಾಲ್ಲೂಕಿನವರು, ಒಬ್ಬರು ತಿಪಟೂರು ತಾಲ್ಲೂಕಿನವರು, ಇನ್ನೊಬ್ಬರು ಅರಸೀಕೆರೆಯವರು ಇದುವರೆಗೂ ಈ ಘಟನೆಗೆ ಸಂಬಂಧಿಸಿದಂತೆ ಪರಿಹಾರವನ್ನು ಕೊಟ್ಟಿಲ್ಲ ಇದನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೂ ತಂದಿದ್ದೇವೆ ಗಾಯಗೊಂಡಿರುವವರಲ್ಲಿ ಸುಮಾರು 12 ಜನರಿಗೆ ಕೈ ಕಾಲುಗಳು ಮುರಿದಿವೆ ಗಾಯಗೊಂಡಿರುವ ಬಾಕಿಯವರಿಗೆ ಸ್ವಲ್ಪ ಏಟು ಬಿದ್ದಿರತಕ್ಕಂಧಾದ್ದು ಆಗಿದೆ ಸತ್ತಿರುವ ಈ ಮೂರು ಜನರ ಕುಟುಂಬಗಳಿಗೆ ಮತ್ತು ಗಾಯಗೊಂಡಿರುವವರಿಗೆ ಇವತ್ತಿನವರೆಗೆ ಏಕೆ ಪರಿಹಾರ ಕೊಟ್ಟಿಲ್ಲ ಎನ್ನುವುದನ್ನು ನಾನು ಕೇಳುತ್ತಿದ್ದೇನೆ

ಶ್ರೀ ಬಿ ನಂಜಾಮರಿ (ತಿಪಟೂರು) ಸನ್ಮಾನ್ಯ ಅಧ್ಯಕ್ಷರೇ, ತಿಪಟೂರಿನಲ್ಲಿ ಅರಸೀಕೆರೆ–ಸಿರ್ಸಿ ಜಾತ್ರೆಯಲ್ಲಿ, ಜಾತ್ರೆಗೆ ಹೋದಂಧ ಜನ ಒಂದು ಮಂಟಪದಡಿಯಲ್ಲಿದ್ದಾಗ ಮಳೆ ಬಿದ್ದು, ಮಂಟಪ ಕುಸಿದು, ನನ್ನ ಕ್ಷೇತ್ರದಲ್ಲೂ ಸಹ ಜನ ಸತ್ತುಹೋಗಿದ್ದಾರೆ, ಸುಮಾರು 3–4 ಜನರಿಗೆ ಕೈಕಾಲು ಮುರಿದಿವೆ ಅದಕ್ಕೆ ಇದುವರೆಗೂ ಪರಿಹಾರವನ್ನು ಕೊಟ್ಟಿಲ್ಲ ಎಂದು ನಮ್ಮ ಕ್ಷೇತ್ರದ ಜನ ಕೇಳುತ್ತಿದ್ದಾರೆ, ದಯವಿಟ್ಟು ಅದಕ್ಕೆ ಪರಿಹಾರ ಕೊಡಿಸಬೇಕು ಎಂದು ತಮ್ಮನ್ನು ನಾನು ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೇ, ಅದರ ಪೂರ್ತಿ ಡೀಟೈಲ್ಸ್ ಕೊಟ್ಟರೆ ಅದರ ಮೇಲೆ ಕ್ರಮವನ್ನು ಜರುಗಿಸುತ್ತೇವೆ

29 ವಿಷಯ ಪಶು ಸಂಗೋಪನಾ ಇಲಾಖೆಯವರು ಔಷಧಿ ಖರೀದಿ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯವರು ಔಷಧಿ ಖರೀದಿ ಮಾಡಿರುವ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ ಅವರಿಗೆ ಔಷಧಿ ಖರೀದಿ ಮಾಡುವುದಕ್ಕೆ ಹಣವೇ ಇಲ್ಲ ಇರುವ ಸ್ವಲ್ಪ ದುಡ್ಡನ್ನೂ ಸಹ ಹೊಡೆದು ತಿಂದಿದ್ದಾರೆ ಅದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ ಯಾರಾದರೂ ಮಂತ್ರಿಗಳು ಇದ್ದರೆ

ದಯವಿಟ್ಟು ಗಮನಿಸಬೇಕು ಅದನ್ನು ಸರಿಪಡಿಸಬೇಕೆಂಬುದು ನನ್ನ ವಿನಂತಿಯಾಗಿದೆ ಸ್ವಾಮಿ 10 ಕೋಟಿ ರೂ ಗಳನ್ನು ಕೊಟ್ಟರೆ, ಇವರು ಬರ ಕಾಮಗಾರಿಗಳಿಗೆ 5 ಕೋಟಿ ರೂ ಗಳು ಬಂದಿದೆ, ಬರಕಾಮಗಾರಿ ಮೇಲೆ 5 ಕೋಟಿ ರೂ ಗಳು ಬಂದಿದ್ದನ್ನು ಟೆಂಡರ್ ಕರೆಯುವುದು ಹೀಗೆ ಯಾವುದನ್ನೂ ಕೂಡ ಯೋಚನೆ ಮಾಡದೆ, ಸರ್ಕಾರಿ ಔಷಧಿ ಕಂಪನಿಗೆ ಸರ್ಕಾರಿ ಪಶುಸಂಗೋಪನೆ ಇಲಾಖೆ ಔಷಧಿ ಕೊಂಡುಕೊಳ್ಳುವುದಕ್ಕೆ 40 ಪರ್ಸೆಂಟ್ ಕಮಿಷನ್ ಕೊಟ್ಟಿದೆ ಒಬ್ಬ ಕಮಿಷನ್ ಏಜೆಂಟ್‌ನ್ನು ನೇಮಕ ಮಾಡಿಕೊಂಡು ಇವರಿಬ್ಬರೂ ಸೇರಿಕೊಂಡು ಹೊಡೆದು ತಿಂದಿದ್ದಾರೆ ಕರ್ನಾಟಕ ರಾಜ್ಯ ಸರ್ಕಾರದ್ದೇ ಒಂದು ಔಷಧಿ ಕಂಪನಿಗೆ, ಕರ್ನಾಟಕ ರಾಜ್ಯದ ಪಶುಸಂಗೋಪನೆ ಇಲಾಖೆ 40 ಪರ್ಸೆಂಟ್ ಕಮಿಷನ್ ಅನ್ನು ಏಕೆ ಕೊಡಬೇಕು? 60 ಪರ್ಸೆಂಟ್ ಇವರಿಗೆ ಹಂಚಿಕೆ ಇದು ಯಾವ ಮಟ್ಟಕ್ಕೆ ಹೋಗಿ ತಲುಪುತ್ತದೆ ನೋಡಿ

ಅಧ್ಯಕ್ಷರು ನೀವು ಹಿರಿಯ ಸದಸ್ಯರು ಈ ತರಹ ಸಮಯ ತೆಗೆದುಕೊಂಡರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ ಇಂಥದ್ದನ್ನೂ ಕೂಡ ನಾವು ಪ್ರಸ್ತಾಪ ಮಾಡದೇ ಇದ್ದರೆ ಹೇಗೆ?

ಅಧ್ಯಕ್ಷರು ಸೂಕ್ಷ್ಮವಾಗಿ ಹೇಳಿಬಿಡಿ

Sri Araga Jnanendra Star Drugs & Vital Health Care Company ಇವೆರಡೂ ಕಂಪನಿಗಳು blacklistಗೆ ಸೇರಿವೆ ಪರ್‌ಚೇಸ್ ಕಮಿಟಿಯಲ್ಲಿ ಇದ್ದಂಥ ಒಬ್ಬ ನಮ್ಮ ರಾಜ್ಯದ ದತ್ತಿ ಡ್ರಗ್ ಕಂಟ್ರೋಲರ್ ಕುಷ್ಟಗಿ ಎನ್ನುವಂಥವರು "ಎರಡೂ ಕೂಡ blacklistಗೆ ಸೇರಿದ ಕಂಪನಿಗಳೂ, ಅಲ್ಲಿಂದ ಔಷಧಿಗಳನ್ನು ಖರೀದಿ ಮಾಡಬಾರದೆಂದು" ಡಿಸ್ಸೆಂಟ್ ನೋಟ್ ಬರೆದಿದ್ದಾರೆ ಆದರೆ Animal Husbandry Departmentನ ನಿರ್ದೇಶಕರು ಅದ್ಯಾವುದನ್ನೂ ಕೂಡ ನೋಡದೆ, ಗಮನಿಸದೆ violate ಮಾಡಿಕೊಂಡು blacklistಗೆ ಸೇರಿದ ಕಂಪನಿಗಳಿಂದ ಈ ಔಷಧಿಯನ್ನು ಖರೀದಿ ಮಾಡಿದ್ದಾರೆ ಪಶುಸಂಗೋಪನಾ ಇಲಾಖೆಯಲ್ಲಿ ಒಂದು ವರ್ಷಕ್ಕೆ ಎರಡೂವರೆ ಲಕ್ಷಕ್ಕಿಂತ ಹೆಚ್ಚಿಗೆ ಬೇವಿನ ಎಣ್ಣೆ ಹೊಂಗೆ ಎಣ್ಣೆಯನ್ನು ಖರೀದಿ ಮಾಡಿರುವುದು ಇತಿಹಾಸದಲ್ಲಿಯೇ ಇರಲಿಲ್ಲ ಇವರು ಬರಕಾಮಗಾರಿ ಹಣದಲ್ಲಿ 70 ಲಕ್ಷ ರೂ ಗಳ ಹೊಂಗೆ ಎಣ್ಣೆ ಮತ್ತು ಬೇವಿನ ಎಣ್ಣೆಯನ್ನು ಖರೀದಿ ಮಾಡಿದ್ದಾರೆ ನಮ್ಮ ಇಡೀ ರಾಜ್ಯಕ್ಕೆ ಅಷ್ಟು ಎಣ್ಣೆಯ ಅಗತ್ಯವಿಲ್ಲ ಏಕೆಂದರೆ ಜಾನುವಾರಿಗೆ ಪೆಟ್ಟಾದರೆ ಬ್ಯಾಂಡೇಜ್ ಮಾಡುವುದಕ್ಕೆ ಅದನ್ನು ಒಂದು ಚೂರು ಉಪಯೋಗಿಸುತ್ತಾರೆ ಅದೂ ಕೂಡ sub-standard ಆಗಿರುವಂಥ ಎಣ್ಣೆಯನ್ನು 70 ಲಕ್ಷ ರೂಗಳಿಗೆ ಖರೀದಿ ಮಾಡಿದ್ದಾರೆ ಈ ಬೇವಿನ ಎಣ್ಣೆ ಹೊಂಗೆ ಎಣ್ಣೆ ಕಂಪನಿಗಳು ನಮ್ಮ ಜಿಲ್ಲಾ ಮಟ್ಟದ ಡೆಪ್ಯುಟಿ ಡೈರೆಕ್ಟರುಗಳು ಟೆಂಡರ್ ಕರೆದಾಗ ಈಗ ಏನು ಖರೀದಿ ಮಾಡಿದ್ದಾರೆ ಇದಕ್ಕಿಂತ 50 ಪರ್ಸೆಂಟ್ ಕಡಿಮೆ ಬೆಲೆಗೆ ಕೊಡುತ್ತೇವೆಂದು ಟೆಂಡರ್ ಹಾಕಿಕೊಂಡಿದ್ದಾರೆ ಆದರೂ ಕೂಡ ಗಮನಿಸದೆಯೇ ಈ ನಿರ್ದೇಶಕರು ಇಷ್ಟೊಂದು ಜಾಸ್ತಿ ಬೆಲೆಗೆ ಕೊಂಡುಕೊಂಡಿದ್ದಾರೆ

ಅಧ್ಯಕ್ಷರು ಶ್ರೀ ಜ್ಞಾನೇಂದ್ರರವರೆ, ಇವೆಲ್ಲಾ ಬಹಳ important ವಿಷಯಗಳನ್ನು ಈಗ ಪ್ರಸ್ತಾಪ ಮಾಡುತ್ತಿದ್ದೀರಿ ಇವೆಲ್ಲವನ್ನು ನೀವು ಬಜೆಟ್ ಮೇಲೆ ಮಾತನಾಡಿದಾಗ ಮಾತನಾಡಬಹುದಿತ್ತು ಬಹಳ serious allegation ಮಾಡುತ್ತಿದ್ದೀರಿ, ಈಗ ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ ನಾನು ಏನು ಮಾಡಲಿ ಸರ್ ನಾನು ಬಜೆಟ್ ಮೇಲೆ ಮಾತನಾಡುವ ಸಂದರ್ಭದಲ್ಲಿ ಈ ದಾಖಲೆಯೇ ನನಗೆ ಸಿಕ್ಕಿರಲಿಲ್ಲ ಮೊನ್ನೆ ನನಗೆ ಸಿಕ್ಕಿ ತಮಗೆ ನೋಟಿಸ್ ಕೊಟ್ಟು 3 ದಿವಸವಾಯಿತು ಎಲ್ಲಾ ಸರಿಯಾಗಿದೆಯೆಂದು ಇವರು ನನಗೆ ಉತ್ತರ ಕೊಡುತ್ತಾರೆ ದಯವಿಟ್ಟು ನೋಡಿ

ಅಧ್ಯಕ್ಷರು ಸಂಬಂಧಪಟ್ಟ ದಾಖಲಾತಿಗಳನ್ನು ಸಂಬಂಧಪಟ್ಟ ಸಚಿವರಿಗೆ ಕೊಡಿ ಬಹಳ serious allegations ಮಾಡುತ್ತಿದ್ದೀರಿ

ಶ್ರೀ ಆರಗ ಜ್ಞಾನೇಂದ್ರ ಈ ಬರಕಾಮಗಾರಿಕೆ ಔಷಧಿ ಯಾವುದು ಕೊಂಡುಕೊಳ್ಳಬೇಕು ಸರ್ Mineral Mixture ಕೊಂಡುಕೊಳ್ಳಬೇಕು antibiotics ಕೊಂಡುಕೊಳ್ಳಬೇಕು ಇಂಥದ್ದನ್ನು ಕೊಂಡುಕೊಳ್ಳುವುದು ಬಿಟ್ಟು ಇವರಿಗೆ ಯಾವುದರಲ್ಲಿ ಜಾಸ್ತಿ ಕಮಿಷನ್ ಬರುತ್ತದೋ ಅದನ್ನು ಕೊಂಡುಕೊಂಡಿದ್ದಾರೆ ಅವೆಲ್ಲವೂ ಹಾಗೆಯೇ ಅಲ್ಲಿ ಬಿದ್ದಿವೆ ಇದರಲ್ಲಿ equipments ಕೂಡ ಅಷ್ಟೆ NDDB ಯವರು ನಾವು ಇದಕ್ಕಿಂತ ಕಡಿಮೆ ಬೆಲೆಗೆ ತಂದು ಕೊಡುತ್ತೇವೆಂದು ಹೇಳಿದರು ಅವರ ಹತ್ತಿರ ತೆಗೆದುಕೊಳ್ಳದೆಯೇ ಬೇರೆ ಯಾವಯಾವುದೋ ಕಂಪನಿಯಿಂದ ಪರ್‌ಚೇಸ್ ಮಾಡಿದ್ದಾರೆ ಬಹಳ serious ಆಗಿ ಇದನ್ನು ತೆಗೆದುಕೊಳ್ಳಬೇಕು ಏಕೆಂದರೆ ಈ ಇಲಾಖೆಗೆ ಹಣವೇ ಇಲ್ಲ ರೈತರಿಗೆ ಕೊಡುವಂಥ ಔಷಧಿಗಳನ್ನೂ ಕೂಡ ಸರಿಯಾಗಿ ಕೊಡದೆ ಇವರ್ಯಾರೋ ಬೆಂಗಳೂರು ಮಟ್ಟದ ನಿರ್ದೇಶಕರು ಮತ್ತು ಬೇರೆ ಬೇರೆ ಅಧಿಕಾರಿಗಳು ಹಂಚಿಕೊಳ್ಳುತ್ತಾರೆ ಎಂದರೆ ದಯಮಾಡಿ ಸರ್ಕಾರ ಇದರ ಬಗ್ಗೆ ಗಮನ ಕೊಡಬೇಕು, ತೀಕ್ಷ್ಣವಾದಂಥ enquiry ಮಾಡಿ ಅವರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಬಹಳ ವಿಷಯ ಇದ್ದರೂ ಕೂಡ ಸಮಯ ಇಲ್ಲ ಎಂದು ತಾವು ಹೇಳುತ್ತಿದ್ದೀರಿ ಆದ್ದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ವಿಳಂಬ ಮಾಡಲಿಕ್ಕೆ ಹೋಗದೇ ಇಲ್ಲಿಗೆ ಮುಗಿಸುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಅಲ್ಲಿ ಮೇಲ್ನೋಟಕ್ಕೆ ಅವ್ಯವಹಾರ ನಡೆದಿದೆ ಎನ್ನುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆಯೆಂದು ಮೊದಲನೆಯದಾಗಿ ಹೇಳುತ್ತಾ, ಇದರಲ್ಲಿ ಯೋಜನೆಗೆ 3 ಲಕ್ಷ ರೂ ಗಳನ್ನು ಮತ್ತು ಯೋಜನೇತರಕ್ಕೆ 6 ಲಕ್ಷ ರೂ ಗಳನ್ನು ಮೊದಲು ಇಡಲಾಗಿತ್ತು ಮೊದಲು ಪರಿಷ್ಕೃತದಲ್ಲಿ ಯೋಜನೆಗೆ 80 ಲಕ್ಷ ರೂ ಗಳನ್ನು ಯೋಜನೇತರದಲ್ಲಿ 300 ಲಕ್ಷ ರೂ ಗಳನ್ನು ಇಡಲಾಗಿದೆ ಆಸ್ಪತ್ರೆ ಪರಿಕರಗಳನ್ನು ಕೊಂಡುಕೊಳ್ಳಲಿಕ್ಕೆ 35 54 ಲಕ್ಷ ರೂಗಳನ್ನು ಇಟ್ಟಿದ್ದೆವು ಅಲ್ಲಿ ಒಟ್ಟು 4 ಕೋಟಿ 7 ಲಕ್ಷದ 17 ಸಾವಿರದ 43 ರೂಪಾಯಿಗಳ ಔಷಧಿ ಮತ್ತು ರಾಸಾಯನಿಕಗಳನ್ನು

ಕೊಂಡುಕೊಳ್ಳಬೇಕಾಗಿತ್ತು ಇವರು ಏನು ಮಾಡಿದರೆಂದರೆ M/s Karnataka Antibiotics & Pharamaceuticals ಮತ್ತು M/s Indian Immunological ಇವರಿಂದ ಖರೀದಿಸಲು ರಾಜ್ಯ ಪಶುಸಂಗೋಪನಾ ಇಲಾಖೆಯಿಂದ ಇವರು ಪರ್ಮಿಷನ್ ತೆಗೆದುಕೊಂಡು 4-a ಇದರಲ್ಲಿ ಈ ಪ್ರಕ್ರಿಯೆಗೆ ವಿನಾಯಿತಿಯನ್ನೂ ಕೂಡ ಅವರು ತೆಗೆದುಕೊಂಡಿದ್ದಾರೆ ಅಂದರೆ Transparency actಗೆ ಒಂದು ವಿನಾಯಿತಿಯನ್ನು ತೆಗೆದುಕೊಂಡರು ಅದರ ಜೊತೆಗೆ Finance Departmentನವರು ಸರ್ಕಾರಿ ಔಷಧ ಉಗ್ರಾಣಕರಾರು ಒಪ್ಪಿಗೆ ಪಡೆದು ಸಂಸ್ಥೆಗಳಿಂದ ಅವಶ್ಯಕತೆಗನುಗುಣವಾಗಿ, ಎಷ್ಟು ಅಗತ್ಯ ಇತ್ತೋ ಅಷ್ಟನ್ನು ಕೊಳ್ಳಬೇಕಾಗಿತ್ತು ಮಾನ್ಯ ಅರಗ ಜ್ಞಾನೇಂದ್ರರವರು ಹೇಳುತ್ತಿರುವುದು ಬಹಳ ಸರಿ ಇದೆ ಆದ್ದರಿಂದ ಅನಗತ್ಯವಾಗಿರುವುದನ್ನೂ ಸಹ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತೆ ಇವರು ಅದನ್ನು ಕೊಂಡುಕೊಳ್ಳುವುದಕ್ಕೆ Finance Department ನಿಂದ concurrence ತೆಗೆದುಕೊಳ್ಳಬೇಕಾಗಿತ್ತು ಅದನ್ನು ತೆಗೆದುಕೊಳ್ಳದೆಯೇ 6 ಕೋಟಿ 74 ಲಕ್ಷ ರೂಪಾಯಿಗಳ ಔಷಧಿಯನ್ನು ಕೊಂಡುಕೊಂಡಿದ್ದಾರೆ ಇದರಲ್ಲಿ ಕೊಂಡುಕೊಳ್ಳಬೇಕಾಗಿರುವುದು 4 ಕೋಟಿ 7 ಲಕ್ಷದ 17 ಸಾವಿರದ 43 ರೂ ಗಳಿಗೆ ಕೊಳ್ಳಬೇಕಾಗಿರುವುದನ್ನು ಸಂಬಂಧಪಟ್ಟ ಅಧಿಕಾರಿ 6 ಕೋಟಿ 74 ಲಕ್ಷ ರೂ ಗಳಿಗೆ ತೆಗೆದುಕೊಂಡಿದ್ದಾರೆ ಆ ಅಧಿಕಾರಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸುತ್ತೇವೆ, ಈ ತರಹ ಆಗುವುದಕ್ಕೆ ಸರ್ಕಾರದಿಂದ ನಾವು ಬಿಡುವುದಿಲ್ಲ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ

30 ವಿಷಯ ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ಬೊಮ್ಮನಹಳ್ಳಿ ನಗರ ಸಭಾ ವ್ಯಾಪ್ತಿಯಲ್ಲಿ ಬರುವ ಕೋಡಿ ಚಿಕ್ಕನಹಳ್ಳಿ ಗ್ರಾಮದ ಪ್ರೌಢ ಶಾಲೆಗೆ ಕಾದಿರಿಸಿದ ಗೋಮಾಳವನ್ನು ಖಾಸಗಿಯವರಿಗೆ ನೀಡಿರುವುದು

ಡಾ ಕೆ ಅನ್ನದಾನಿ (ಮಳವಳ್ಳಿ) ಮಾನ್ಯ ಅಧ್ಯಕ್ಷರೆ, ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ಬೊಮ್ಮನಹಳ್ಳಿ ನಗರಸಭಾ ವ್ಯಾಪ್ತಿಗೆ ಬರತಕ್ಕಂಥ ಕೋಡಿಚಿಕ್ಕನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆಗೆ ಕಾದಿರಿಸಿದಂಥ ಸರ್ಕಾರಿ ಗೋಮಾಳವನ್ನು ಖಾಸಗಿಯವರಿಗೆ ಬರೆದು ಕೊಟ್ಟಿರುವಂಥ ವಿಚಾರವಾಗಿ ಮಾತನಾಡುತ್ತಿದ್ದೇನೆ ಈ ಗ್ರಾಮದ ಸುತ್ತಮುತ್ತ ಸುಮಾರು 500 ಪರಿಶಷ್ಟ ಜಾತಿ / ಪರಿಶಿಷ್ಟ ವರ್ಗ ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ವಾಸಿಸತಕ್ಕಂಥ ಈ ಪ್ರದೇಶದಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆಗಳು ಇರುವುದಿಲ್ಲ ಹಾಗಾಗಿ ಇಲ್ಲಿ ಪ್ರೌಢಶಾಲೆಗಾಗಿ ಮತ್ತು ಮಕ್ಕಳ ಆಟದ ಮೈದಾನಕ್ಕಾಗಿ ಈ ಸರ್ಕಾರಿ ಗೋಮಾಳವನ್ನು ಬಳಸಿಕೊಳ್ಳುತ್ತೇವೆಂದು ನಗರ ಸಭೆಯವರು ಅದಕ್ಕೆ ಕಾಂಪೌಂಡನ್ನು ಕೂಡ ಹಾಕಿ ಬಿಟ್ಟಿದ್ದಂಥ ಸಂದರ್ಭದಲ್ಲಿ ಖಾಸಗಿಯವರಿಗೆ ಇದನ್ನು "ಜಿಲ್ಲಾಧಿಕಾರಿಗಳು, ಸಂಖ್ಯೆ ಎಎಲ್‌ಡಿ ಎಸ್‌ಸಿಆರ್ 110/03-04, ದಿನಾಂಕ 21-06-2004ರಂದು ಖಾಸಗಿಯವರಿಗೆ ಮಂಜೂರು ಮಾಡಿರುತ್ತಾರೆ" ಇದಕ್ಕೆ ಆ